# ಶ್ರೀ ರತ್ನ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್

**(ನೋಂದಣಿ ಸಂಖ್ಯೆ: ಯುಬಿಸಿ1/428/ಆರ್.ಜಿ.ಎನ್./49106/2016–17)**
**(ಸರ್ವೆ ನಂ: 26/5, ಮೊದಲನೇ ಮಹಡಿ, ನ್ಯೂ ಬ್ಯಾಂಕ್ ಕಾಲೋನಿ, ಅಮೃತನಗರ ಮುಖ್ಯ ರಸ್ತೆ,**
**ಕೋಣನಕುಂಟೆ, ಬೆಂಗಳೂರು–560 062)**

"ಶ್ರೀ ರತ್ನ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್" ಇದರ 2ನೇ ವಾರ್ಷಿಕ ಸರ್ವ ಸದಸ್ಯರ ಸಾಮಾನ್ಯ ಸಭೆಯು ದಿನಾಂಕ: 14ನೇ ಸೆಪ್ಟೆಂಬರ್ 2019ರಂದು ಶನಿವಾರ ಬೆಳಗ್ಗೆ 11:00 ಗಂಟೆಗೆ ಸಿಲಿಕಾನ್ ಸಿಟಿ ಶಾಲೆಯ ಆಡಿಟೋರಿಯಂ ಅಲ್ಲಿ ನಡೆಯಿತು. ಸಭೆಯಲ್ಲಿ 151 ಮಂದಿ ಸದಸ್ಯರು ಹಾಜರಿದ್ದರು. ಸಂಘದ ಅಧ್ಯಕ್ಷರಾದ ಶ್ರೀ ಕೆ.ಬಿ. ಲಕ್ಷ್ಮಣ್ ಅವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು.

1) ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಲಿ ಸದಸ್ಯರು ಜ್ಯೋತಿ ಬೆಳಗಿಸುವ ಮೂಲಕ ಸಭೆಯ ಕಾರ್ಯಕಲಾಪವನ್ನು ಉದ್ಘಾಟಿಸಿದರು. ಶ್ರೀಮತಿ ಸರಸ್ವತಿ ಅವರು ದೇವರಿಗೆ ಪ್ರಾರ್ಥನೆ ಸಲ್ಲಿಸುವ ಮೂಲಕ ಸಭೆಯು ಆರಂಭವಾಯಿತು.

2) ಸಂಘದ ಹಿರಿಯ ಸಲಹೆಗಾರರಾದ ಶ್ರೀ ಎಂ.ಎಸ್. ಸತ್ಯನಾರಾಯಣ ರಾವ್ ಅವರು ಸಂಘದ ಅಧ್ಯಕ್ಷರನ್ನು, ಉಪಾಧ್ಯಕ್ಷರನ್ನು, ನಿರ್ದೇಶಕರುಗಳನ್ನು ಪರಿಚಯಿಸಿದರು ಹಾಗೂ ಸದಸ್ಯರುಗಳನ್ನು ಆತ್ಮೀಯವಾಗಿ ಸ್ವಾಗತಿಸುತ್ತಾ 2ನೇ ವಾರ್ಷಿಕ ಸಾಮಾನ್ಯ ಸಭೆಯ ಕಾರ್ಯಕಲಾಪಗಳು ಆರಂಭಗೊಂಡಿತು. ಈ ಒಂದು ವರ್ಷದ ಕಡಿಮೆ ಅವಧಿಯಲ್ಲಿ ಸಂಘವು ಉತ್ತಮ ಪ್ರಗತಿಯನ್ನು ಸಾಧಿಸಲು ಸದಸ್ಯರ ಸಹಕಾರವೇ ಕಾರಣವೆಂದರು.

3) ಸಂಘದಲ್ಲಿದ್ದ ಇಬ್ಬರು ಸದಸ್ಯರುಗಳಾದ ಶ್ರೀ ಶಿವಕುಮಾರ್ ಎಸ್. ಹಾಗೂ ಶ್ರೀ ಶಂಕರ್ ರೆಡ್ಡಿ ಅವರುಗಳು ದೈವಧೀನರಾದ ಕಾರಣ ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತ ಒಂದು ನಿಮಿಷದ ಮೌನಾಚರಣೆಯನ್ನು ಮಾಡಲಾಯಿತು.

4) ಸಂಘದ 2ನೇ ವಾರ್ಷಿಕ ಸರ್ವ ಸದಸ್ಯರ ಸಭೆಯ ಸೂಚನಾ ಪತ್ರವನ್ನು ಹಾಗೂ ಕಾರ್ಯಕ್ರಮಗಳ ಪಟ್ಟಿಯನ್ನು ಸಂಘದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯಾದ ಶ್ರೀ ಸಂತೋಷ ಜೆ., ಅವರು ಸಭೆಯ ಮುಂದೆ ಓದಿದರು

5) ದಿನಾಂಕ 8ನೇ ಸೆಪ್ಟೆಂಬರ್ 2018ರಂದು ನಡೆದ 1ನೇ ಸದಸ್ಯರ ಸಾಮಾನ್ಯ ಸಭೆಯ ನಡಾವಳಿಯನ್ನು ಓದಿದಂತೆ ಪರಿಗಣಿಸಿ ಅನುಮೋದಿಸಲಾಯಿತು.

6) ಸಭೆಯ ಸೂಚನಾ ಪತ್ರ, ಕ್ರಮ ಸಂಖ್ಯೆ: 5ರಿಂದ 10ರವರೆಗೆ, ವಿಷಯಗಳು ಒಂದೊಂಕ್ಕಂದು, ಸಂಭಂದವಿರುವ ಕಾರಣ, ಅವುಗಳನ್ನು ಒಟ್ಟಿಗೆ, ಪರಿಗಣಿಸಬಹುದೆಂದು ಎಂ.ಎಸ್. ಸತ್ಯನಾರಾಯಣ ರಾವ್ ಅಭಿಪ್ರಾಯ ಪಟ್ಟರು. ಸಭೆಯು ಅದಕ್ಕೆ ಒಪ್ಪಿಗೆ ನೀಡಿತು.

7) ಸಂಘವು ಈ ಒಂದು ವರ್ಷದ ಕಡಿಮೆ ಅವಧಿಯಲ್ಲಿ ಬಹಳ ವೇಗವಾಗಿ ಅಭಿವೃದ್ಧಿಯತ್ತ ನಡೆದು ಬಂದ ರೀತಿಯನ್ನು ವಿವರಿಸುತ್ತಾ ಸಂಘವು 23ನೇ ನವೆಂಬರ್ 2017ರಂದು ನೋಂದಾಯಿಸ್ಪಟ್ಟು, ಸಂಘದ ಅಧ್ಯಕ್ಷರಾದ ಶ್ರೀ ಕೆ.ಬಿ. ಲಕ್ಷ್ಮಣ್‌ರವರಿಂದ 10–4–2018 ರಂದು ಉದ್ಘಾಟಿಸಲ್ಪಟ್ಟಿತು ಹಾಗೂ 10ನೇ ಏಪ್ರಿಲ್ 2018 ರಂದು ಸಂಘದ ಚಟುವಟಿಕೆಗಳು ಪೂರ್ಣ ಪ್ರಮಾಣದಲ್ಲಿ ಆರಂಭವಾಯಿತೆಂದು ತಿಳಿಸಿದರು. ಕಳೆದ ವರ್ಷ ದಿನಾಂಕ: 31–03–2018ನೇ ಸಾಲಿಗೆ ಷೇರು ಬಂಡವಾಳವು ರೂ. 20,37,200 ಆಗಿದ್ದು ಪ್ರಸಕ್ತ ವರ್ಷ ಅಂದರೆ 31–03–2019 ರಲ್ಲಿ ಷೇರು ಬಂಡವಾಳವು ರೂ. 31,59,250 ಹೆಚ್ಚಳವಾಗಿದ್ದು ಇದು ಕಳೆದ ಸಾಲಿಗಿಂತ ಶೇ. 55 ರಷ್ಟು ಪ್ರಗತಿ ಹೊಂದಿದೆ ಎಂದು ಸಭೆಗೆ ತಿಳಿಸಿದರು. 2019ರಲ್ಲಿ ತಹಲ್‌ವರೆಗೆ ಸಂಗ್ರಹವಾದ ಠೇವಣಿ ರೂ. 7 ಕೋಟಿಗೂ ಹೆಚ್ಚಿದ್ದು ಅದರಲ್ಲಿ 3

ಕೋಟಿಯವರೆಗೆ ಸಾಲ ಸೌಲಭ್ಯಗಳನ್ನು ನೀಡಲಾಗಿದೆ ಎಂದರು. ಎಲ್ಲ ಗ್ರಾಹಕರು ಸಮಯಕ್ಕೆ ಸರಿಯಾಗಿ ಸಾಲವನ್ನು ಮರುಪಾವತಿ ಮಾಡುತ್ತಿದ್ದಾರೆಂದು ತಿಳಿಸಿ ಅಭಿನಂದಿಸಿದರು. ಸದಸ್ಯರುಗಳಿಗೆ ತಮ್ಮ ಹೆಚ್ಚುವರಿ ಹಣವನ್ನು ಸಂಘದಲ್ಲಿ ಠೇವಣಿ ಮಾಡಲು ಪ್ರಾರ್ಥಿಸಿದರು. ಹಾಗೂ ಸಂಘದಿಂದ ಸಿಗುವ ಎಲ್ಲಾ ಸವಲತ್ತುಗಳನ್ನು ಪಡೆದುಕೊಳ್ಳಬೇಕೆಂದರು. ಅವಶ್ಯವಿದ್ದಲ್ಲಿ ಸಂಘದಿಂದ ಸಾಲವನ್ನು ಪಡೆಯುವುದಲ್ಲದೆ ಸಮಯಕ್ಕೆ ಸರಿಯಾಗಿ ಸಾಲದ ಕಂತುಗಳನ್ನು ಕಟ್ಟಿ ಸಂಘವನ್ನು ಅಭಿವೃದ್ಧಿಗೊಳಿಸಬೇಕೆಂದರು.

8) 2018–19ನೇ ಸಾಲಿನ ನಿರ್ದೇಶಕ ಮಂಡಲಿಯ ವಾರ್ಷಿಕ ವರದಿಯನ್ನು ಸಭೆಯು ಅವಿರೋಧವಾಗಿ ಅನುಮೋದಿಸಿತು.

9) 2019–20 ರಿಂದ 21–22ರ ಪ್ರಸಕ್ತ ಹಾಗೂ ಮುಂದಿನ ಮೂರು ವರ್ಷಗಳಲ್ಲಿ ಸಂಘದ ಬೆಳವಣಿಗೆ ಹಾಗೂ ಅಭಿವೃದ್ಧಿಯ ಗುರಿಯನ್ನು ಮುಟ್ಟುವ ಕುರಿತು ಮಾಹಿತಿಯನ್ನು ಸಭೆಯಲ್ಲಿ ಚರ್ಚಿಸಲಾಯಿತು. ಸದಸ್ಯರಾದ ನಾಗರಾಜ್ ಅವರು ಸದಸ್ಯತ್ವ ಸಂಖ್ಯೆ 830 ಇವರು ಸೂಚಿಸಿದರು ಹಾಗೂ ಮರಿಯಪ್ಪ, ಸದಸ್ಯತ್ವ ಸಂಖ್ಯೆ 287 ಅವರು ಅನುಮೋದಿಸಿದರು.

10) 2018–19ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು ಲೆಕ್ಕ ಪರಿಶೋಧಕರಾದ ಶ್ರೀ ನಾಗಭೂಷಣ, ಎಂ.ಎನ್.ಎಸ್. ಕಂ. ಅವರಿಂದ ಪರಿಶೋಧಿಸಲ್ಪಟ್ಟಿದ್ದು ಸದರಿ ವರದಿ ಹಾಗೂ ಅನುಪಾಲನಾ ವರದಿಯೊಂದಿಗೆ ಸಭೆಯ ಮುಂದೆ ಮಂಡಿಸಲಾಯಿತು. ಹಾಗೆಯೇ 2019–20ನೇ ಸಾಲಿಗೆ M/s MNS Co., Chartered Accountants ಇವರನ್ನು ನೇಮಕಾತಿ ಮಾಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು. ವರದಿ ಸಾಲಿನಲ್ಲಿ ಸಂಘವು ಲಾಭವನ್ನುಗಳಿಸಿಲ್ಲದಿರುವ ಕಾರಣದಿಂದ, ಲಾಭದ ವಿಂಗಡನೆಯನ್ನು ಮಾಡಲಾಗಿಲ್ಲವೆಂದು ತಿಳಿಸಿದರು. ಸಭೆಯು ಇದನ್ನು ಸರ್ವಾನುಮತದಿಂದ ಅಂಗೀಕರಿಸಿತು. ಶ್ರೀ ರಾಜೇಂದ್ರ, ಸದಸ್ಯತ್ವ ಸಂಖ್ಯೆ 974 ಅವರು ಸೂಚಿಸಿದರು, ಶ್ರೀ ದತ್ತಾತ್ರೇಯ ಹೆಗಡೆ, ಸದಸ್ಯತ್ವ ಸಂಖ್ಯೆ: 1504 ಅವರು ಅನುಮೋದಿಸಿದರು.

11) ಕರ್ನಾಟಕ ರಾಜ್ಯ ಸಹಕಾರಿ ಸಂಘಗಳ ಅಧಿನಿಯಮ 12 (1) ಹಾಗೂ ನಿಯಮಗಳು (6) ಇವುಗಳಡಿಯಲ್ಲಿ, ಉಪವಿಧಿಗಳ ಉದ್ದೇಶಿತ ತಿದ್ದುಪಡಿಯ ಪ್ರಸ್ತಾವವನ್ನು ಸಭೆಯ ಮುಂದೆ ಮಂಡಿಸಲಾಯಿತು. ತಿದ್ದುಪಡಿಯ ಪಾಠ ಮತ್ತು ಪ್ರಸ್ತಾವಿಕ ತಿದ್ದುಪಡಿಯ ಪಾಠ ಅದಕ್ಕೆ ಕಾರಣಗಳೊಂದಿಗೆ, ಎಲ್ಲ ಸದಸ್ಯರುಗಳಿಗೆ ಸ್ಪಷ್ಟ ಹದಿನೈದು ದಿನಗಳ ನೋಟೀಸನ್ನು ನೀಡಲಾಗಿ, ಸದರಿ ತಿದ್ದುಪಡಿಯನ್ನು ಸದಸ್ಯರ ಸಾಮಾನ್ಯ ಸಭೆಯ ಮುಂದೆ ಮಂಡಿಸಲಾಯಿತು. ಶ್ರೀ ರಾಜೇಂದ್ರ, ಸದಸ್ಯತ್ವ ಸಂಖ್ಯೆ 974 ಸೂಚಿಸಿದರು, ಶ್ರೀ ರಾಮಕೃಷ್ಣ ಸದಸ್ಯತ್ವ ಸಂಖ್ಯೆ 940 ಅವರು ಅನುಮೋದಿಸಿದರು. ಇದನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

12) ಸಂಘದ ಉಪಾಧ್ಯಕ್ಷರಾದ ಶ್ರೀ ಶ್ರೀಧರ್ ಎಲ್ ಅವರು ಸಭೆಯನ್ನು ಉದ್ದೇಶಿಸಿ ಸಂಘ ಬೆಳದು ಬಂದ ರೀತಿ ಹಾಗೂ ಸಂಘವು ಒಂದು ವರ್ಷಗಳಲ್ಲಿ ಸಾಧಿಸಿರುವ ಪ್ರಗತಿ, ಷೇರು ಬಂಡವಾಳ, ಠೇವಣಿ, ವಾಹನದ ಮೇಲಿನ ಸಾಲ, ಇವುಗಳ ಮೇಲೆ ಬೆಳಕು ಚೆಲ್ಲಿದರು. ಪ್ರಸಕ್ತ ಸಾಲಿನಲ್ಲಿ ಒಟ್ಟು ಸಂಗ್ರಹವಾದ ಠೇವಣಿ ರೂ.7.00 ಕೋಟಿಗೂ ಹೆಚ್ಚಾಗಿದ್ದು ಸಾಲ ಸೌಲಭ್ಯಗಳು ರೂ.3 ಕೋಟಿಗೂ ಹೆಚ್ಚಾಗಿರುತ್ತದೆ. ಈ ಪ್ರಗತಿಗೆ ಕಾರಣ ಕರ್ತರಾದ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಹಾಗೆ, ಆಡಳಿತ ಮಂಡಲಿ ಸದಸ್ಯರಿಗೂ ಪ್ರಮಾಣಿಕವಾಗಿ, ಶ್ರದ್ಧೆಯಿಂದ ಕೆಲಸ ಮಾಡುತ್ತಿರುವ ಸಿಬ್ಬಂದಿ ವರ್ಗದವರಿಗೂ ಕೃತಜ್ಞತೆಗಳನ್ನು ಸಲ್ಲಿಸಿದರು. ಸಂಘವು ಪ್ರಗತಿಯನ್ನು ಸಾಧಿಸುವ ಸಲುವಾಗಿ, ಮುಂದಿನ 5 ವರ್ಷಗಳ ಅಂದಾಜು ಯೋಜನೆಯನ್ನು ಈಗಲೇ ಸಿದ್ದಪಡಿಸಿ, ವಾರ್ಷಿಕ ವರದಿಯಲ್ಲಿ ನೀಡಲಾಗಿದೆ. ಅದರಂತೆ ಕಾರ್ಯನಿರ್ವಹಿಸಿ, ಗುರಿಯನ್ನು ಮುಟ್ಟಲು ಅವಿರತವಾಗಿ ಶ್ರಮಿಸುತ್ತೇವೆ, ಎಂದರು. ಇದಕ್ಕಾಗಿ, ನಿಮ್ಮ ಬೆಂಬಲ ಇರುತ್ತದೆ ಎಂದು ನಂಬಿದ್ದೇವೆ ಎಂದರು. ಸದಸ್ಯರು, ಕಾನೂನು ರೀತ್ಯ ಸಾಮಾನ್ಯ ಸಭೆಗೆ ಹಾಜರಾಗುವುದು ಹಾಗೂ ಕನಿಷ್ಠ ಸೇವೆಯನ್ನು ಬಳಸಿಕೊಳ್ಳುವ ಬಗ್ಗೆ ವಿವರವಾಗಿ ಸಭೆಗೆ ತಿಳಿಸಿದರು. ಸಂಘದಲ್ಲಿ ನಿಮ್ಮ ಹಣವನ್ನು ತೊಡಗಿಸಿ ಹೆಚ್ಚು ಬಡ್ಡಿಗಳಿಸಿ ಹಾಗೂ ಸಾಲ

ಸೌಲಭ್ಯಗಳನ್ನು ಕಡಿಮೆ ದರದಲ್ಲಿ ಪಡೆಯಿರಿ. ಹಾಗೆ ತೆಗೆದುಕೊಂಡಂತೆ ಸಾಲದ ಮರುಪಾವತಿ ಮಾಡಿ, ಸಂಘದ ಬೆಳವಣಿಗೆಯಲ್ಲಿ ಭಾಗಿಯಾಗುವಂತೆ ವಿನಂತಿಸಿದರು.

13) ಶ್ರೀ ಎಂ.ಎಸ್. ಸತ್ಯನಾರಾಯಣ ರಾವ್ ಅವರಿಂದ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರುಗಳಿಗೆ ಸದಸ್ಯರುಗಳಿಗೆ ವಂದನೆಗಳನ್ನು ಸಲ್ಲಿಸುತ್ತಾ ಸಂಘದ 2ನೇ ವಾರ್ಷಿಕ ಸಭೆಯನ್ನು ನಡೆಸಲು ಸುಸಜ್ಜಿತವಾದ ಸಭಾಂಗಣವನ್ನು ನೀಡಿದ ಸಿಲಿಕಾನ್ ಸಿಟಿ ಸ್ಕೂಲಿನ ಆಡಳಿತ ವರ್ಗದವರಿಗೆ ವಂದನೆಗಳನ್ನು ಸಲ್ಲಿಸಿದರು. ಶುಶ್ರಾವ್ಯವಾಗಿ ಹಾಡಿ ಪ್ರಾರ್ಥನೆಯನ್ನು ಮಾಡಿದ ಶ್ರೀಮತಿ ಸರಸ್ವತಿಯವರಿಗೂ ಹಾಗೂ ಸಂಘದ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿಕೊಟ್ಟ ಶ್ರೀಮತಿ ಶ್ರೀಮತಿಯವರಿಗೂ ವಂದನೆಗಳನ್ನು ಸಲ್ಲಿಸಿದರು. ಸಂಘದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯಾದ ಶ್ರೀ ಸಂತೋಷ ಜೆ. ಅವರಿಗೂ ಮತ್ತು ಸಂಘದ ಎಲ್ಲಾ ಸಿಬ್ಬಂದಿ ವರ್ಗದವರಿಗೂ ವಂದಿಸಿದರು. ನಂತರ ಶಾಂತಿ ಸೂಕ್ತದೊಂದಿಗೆ ಸಭೆಯು ಮುಕ್ತಾಯವಾಯಿತು.

| | |
|---|---|
| ಸಹಿ | ಸಹಿ |
| ಮುಖ್ಯ ನಿರ್ವಹಣಾಧಿಕಾರಿ | ಅಧ್ಯಕ್ಷರು |
| ಶ್ರೀ ಸಂತೋಷ್ ಜೆ. | ಶ್ರೀ ಕೆ.ಬಿ. ಲಕ್ಷ್ಮಣ್ |